ಅಸ್ತಿತ್ವದಲ್ಲಿಯೇ ಇಲ್ಲ. ನಿಜವಾಗಿ ಹೇಳಬೇಕೆಂದ್ರೆ ಲವ್ ಈಸ್ ಜಸ್ಟ್ ಎನ್ ಎವಲೂಷನರಿ ಕಾಂಪ್ರಮೈಸ್ ಅಷ್ಟೇ. ನನ್ನ ರಿಲೇಷನ್‌ಶಿಪ್‌ಗಳಲ್ಲಿ ನೊ ಸ್ಟ್ರಿಂಗ್ಸ್ ಅಟ್ಯಾಚ್ಡ್. ಅದರಲ್ಲಿ ನನಗೆ ನಂಬಿಕೆಯೇ ಇಲ್ಲ' ಎನ್ನುತ್ತ, ಹೆಣ್ಣು ಗಂಡು ಸಂಬಂಧ ಸೆಕ್ಸ್ ಇತ್ಯಾದಿಗಳ ಬಗ್ಗೆ ಸರಿಯಾಗಿ ಕೊರೆದ.

ಗ್ಲಾಸಿನಲ್ಲಿಯ ಐಸು ಕರಗುತ್ತಾ ಮೆದುಳಿನ ನರಗಳು ನಿಧಾನವಾಗಿ ಸಡಿಲವಾಗಲು ಆಗಷ್ಟೇ ಶುರುವಾಗಿದ್ದವು. ನಡುವೆ, ಸ್ಟೇಜಿನ ಮೇಲೆ ನರ್ತಿಸುತ್ತಿರುವ ಹುಡುಗಿಯರತ್ತ ನೋಡುತ್ತ ಮೋ ಅನಿರೀಕ್ಷಿತ ಪ್ರಶ್ನೆಯೊಂದನ್ನು ತೂರಿಬಿಟ್ಟ 'ಇವರಲ್ಲಿ ಯಾವ ಹುಡುಗಿ ಇಷ್ಟವಾದಳು ನಿನಗೆ?' ಇಂಥಾ ಪಕ್ಕಾ ಪರ್ಸನಲ್ ಎನ್ನಿಸುವ ಪ್ರಶ್ನೆಗೆ ಹೇಗೆ ಉತ್ತರಿಸುವುದೆಂದು ನಾಚಿ ತಡವರಿಸುತ್ತಿರುವ ನನ್ನನ್ನು ಹುರುದುಂಬಿಸುವಂತೆ 'ಕಮಾನ್, ವ್ಹಾಯ್ ಹೆಸಿಟೇಟ್?... ನೋಡು ಆ ನೀಲೀ ಚಡ್ಡಿ ಹಾಕಿದ್ದಾಳಲ್ಲ, ಅವಳು ಇಷ್ಟವಾದಳು ನನಗೆ... ಈಗ ಲೆಟ್ ಮಿ ನೊ ಯುವರ್ ಚಾಯ್ಸ್...' ಎಂದ. ನಾನು 'ಹೆ ಹ್ಹೆ ಹ್ಹೆ...' ಎಂದೆ. ಆದರೂ ಬಿಡದೇ ಒತ್ತಾಯಿಸಿದ. ಹೇಗ್‌ಹೇಗೊ ಸುಧಾರಿಸಿಕೊಳ್ಳುತ್ತ ಹೇಳಲೋ ಬಿಡಲೋ ಅನ್ನುತ್ತಲೇ ಅವರಲ್ಲೇ ಒಬ್ಬಳನ್ನು ತೋರಿಸಿ 'ಇವಳು ಪರವಾಗಿಲ್ಲ' ಅಂದೆ. ಭಯಂಕರ ಹುರುಪು ಬಂದಂತೆ ಆತ 'ವದ್ಧಾ... ವದ್ಧಾss...' ಅನ್ನುತ್ತ, 'ವೆಲ್. ನೀನು ನಿನ್ನ ಡ್ರಿಂಕ್ಸ್ ಮುಗಿಸುವಷ್ಟರಲ್ಲಿ ಸೆಟ್ ಮಾಡಿ ಬರುತ್ತೇನೆ. ನಿನ್ನ ಮನಗೆದ್ದ ಹುಡುಗಿ ಇನ್ನರ್ಧ ತಾಸಿನಲ್ಲಿ ನಿನ್ನ ತೆಕ್ಕೆಯಲ್ಲಿ... ಹವ್ ಈಜ್ ಇಟ್?...' ಎನ್ನುತ್ತ ಸೋಫಾದಿಂದ ಎದ್ದ. ನಾನು ಹೌಹಾರಿ ಹೋದೆ. ನನ್ನನ್ನು ಏನೆಂದುಕೊಂಡಿದ್ದೀಯ ಎನ್ನುವ ಅರ್ಥ ಬರುವಂತೆ ಕಣ್ಣರಳಿಸಿ ಏನೂ ಬೇಡವೆನ್ನುತ್ತ, ಅರ್ಧ ಕುಡಿದ ವಿಸ್ಕಿ ಗ್ಲಾಸ್ ಅಲ್ಲಿಯೇ ಇಟ್ಟು ಹೊರನಡೆದೆ. ನನ್ನ ಈ ತೀವ್ರ ಪ್ರತಿಕ್ರಿಯೆಗೆ ಅಷ್ಟೇನೂ ವಿಚಲಿತನಾದಂತೇ ತೋರದ ಆತ 'ಹೇ... ಕೂಲ್ ಮ್ಯಾನ್...' ಅನ್ನುತ್ತ ನನ್ನ ಹಿಂದೆಯೇ ಬಂದ. 'ಲೆಟ್ಸ್ ಹ್ಯಾವ್ ಡಿನ್ನರ್ ಅಟ್ಲೀಸ್ಟ್' ಅಂದ. ನಾನು ಬಿರಬಿರನೆ ನಡೆಯುತ್ತ ಹೊರಬಿದ್ದೆ. ಏನೂ ಆಗದವರಂತೆ, ಮೊದಲಿನಷ್ಟೇ ಸಹಜವಾಗಿ ನನ್ನೊಡನೆ ಮಾತನಾಡುತ್ತ ಹೋಟೆಲ್ಲಿನ ರೂಮಿನವರೆಗೂ ಕಾರಿನಲ್ಲಿ ಬಿಟ್ಟು ಹೋದ.

ಆ ರಾತ್ರಿಯಿಡೀ ನನಗೆ ತುಂಬ ಹೊತ್ತಿನವರೆಗೆ ನಿದ್ದೆಯೇ ಬರಲಿಲ್ಲ. ಆ ವೈಭವೋಪೇತ ಹೋಟೆಲು, ಆ ರೆಸ್ಟೊರೆಂಟು, ಬಾಗಿಲಲ್ಲಿ ನಿಂತಿದ್ದ ರಾಜನ ಪೋಷಾಕಿನ ಗಾರ್ಡು ಓಡುತ್ತ ಬಂದು ಕಾರಿನ ಬಾಗಿಲು ತೆಗೆದು ನಮ್ಮನ್ನು ಬೀಳ್ಕೊಟ್ಟ ರೀತಿ... ಆ ಅಸಮಾಧಾನದ

**ಆದರಲ್ಲೂ ಆತ 'ವದ್ಧಾss...' ಎಂದು ಹೇಳುವ ರೀತಿಯೇ ಒಂಥರಾ ಚೆಂದ. 'ವ'ವನ್ನು ಒತ್ತಿ ಹೇಳಿ ನಂತರ ಮೊದಲ 'ದ'ವನ್ನು ಮೆದುವಾಗಿಯೂ ಎರಡನೇ 'ಧ'ವನ್ನು ಜೋರಾಗಿ ಹೇಳುತ್ತಲೇ ಎಳೆಯುವುದು ಪಕ್ಕಾ ಸ್ಪ್ಯಾನಿಶ್ ಉಚ್ಛಾರವೇ. ಅದು ಸ್ಪ್ಯಾನಿಶ್ ಭಾಷೆಯ ಶಬ್ದವಂತೆ. ಸ್ಪೇನ್ ದೇಶದಲ್ಲೇ ಹೆಚ್ಚಿನ ವ್ಯವಹಾರಗಳನ್ನು ನಡೆಸುವ ಆತ ಸ್ಪ್ಯಾನಿಶ್‌ಅನ್ನು ನಿರರ್ಗಳವಾಗಿ ಮಾತನಾಡುತ್ತಾನೆ.**